ಇ ಸಿ ಎ ನಂ. 2/2019

ಪಿ ಡಬ್ಲ್ಯು 1

ದಿನಾಂಕ 08-08-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರಃ ಶ್ರೀ ಜಿ ಎನ್ ವಿ ವಕೀಲರಿಂದಃ

ಜಗದೀಶ್ ರವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 11 ಎಂದು, ಒಂದು ಸ್ವಯಂ ಪ್ರಮಾಣೀಕೃತ ವಂಶವೃಕ್ಷವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-12 ಎಂದು, ಡಿಸ್ಚಾರ್ಜ್ ಸಮ್ಮರಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-13 ಎಂದು, ಎರಡು ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-14 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ 1 ನೇ ಎದುರುದಾರರ ಪರಃ ಶ್ರೀ ಹೆಚ್ ಟಿ ಆರ್ ವಕೀಲರಿಂದಃ

1 ನೇ ಎದುರುದಾರರಾದ ಮಂಜುನಾಥ ಬಿ ಜೆ ರವರು ನನ್ನ ಸಹೋದರರು ಎಂದರೆ ಸರಿ. ನಾನು ಮೃತ ಜಗದೀಶ್ ರವರ ವಾರಸುದಾರನಾಗಿರುತ್ತೇನೆ ಎಂದರೆ ಸರಿ. 1 ನೇ ಎದುರುದಾರರು ಕೆಎ-03 ಎಸಿ-6268 ವಾಹನದ ಮಾಲೀಕರಾಗಿರುತ್ತಾರೆ ಎಂದರೆ ಸರಿ. ಅಪಘಾತವಾಗುವ ಕಾಲಕ್ಕೆ ನನ್ನ ತಂದೆ ಜಗದೀಶ್ ರವರು ಸೂಕ್ತವಾದ ಚಾಲನಾ ಪರವಾನಿಗಿ ಹೊಂದಿದ್ದರು ಎಂದರೆ ಸರಿ. ಅಪಘಾತವಾದ ದಿನ 1 ನೇ ಎದುರುದಾರರು ಮತ್ತು ನನ್ನ ತಂದೆ ನಡುವೆ ಮಾಲೀಕ ಮತ್ತು ಕಾರ್ಮಿಕ ಸಂಬಂದ ಇತ್ತು ಎಂದರೆ ಸರಿ. ಅಪಘಾತವಾದ ದಿನ ನನ್ನ ತಂದೆಯನ್ನು 1 ನೇ ಎದುರುದಾರರು ಕೆಎ-03 ಎಸಿ-6268 ರ ಕಾರನ್ನು

ಚಾಲನೆ ಮಾಡಲು ನೇಮಕ ಮಾಡಿಕೊಂಡಿದ್ದರು ಎಂದರೆ ಸರಿ. ಅಪಘಾತವಾದ ಕಾಲಕ್ಕೆ ಸದರಿ ಕಾರಿಗೆ ವಿಮೆ ಚಾಲ್ತಿಯಲ್ಲಿದ್ದು, ನನ್ನ ತಂದೆಗೆ ಸೂಕ್ತವಾದ ಚಾಲನಾ ಪರವಾನಿಗಿ ಇದ್ದ ಕಾರಣ 2 ನೇ ಎದುರುದಾರರು ಪರಿಹಾರ ಕೊಡಲು ಬಾದ್ಯಸ್ಥರಾಗಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲುಃ 2 ನೇ ಎದುರುದಾರರ ಪರಃ ಶ್ರೀ ಸಿ ಜೆ ಎಂ ವಕೀಲರಿಂದಃ

2 ನೇ ಎದುರುದಾರರ ಪರ ವಕೀಲರು ಗೈರು ಹಾಜರು ಇರುವ ಕಾರಣ ಪಾಟೀ ಸವಾಲಿಗೆ ಮುಂದೂಡಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಒ**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
**ಪ್ರದನ್ಯಾದಂ., ಕಡೂರು.**